**ದಿನಾಂಕ: 16-02-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ ಪಿ.ಪಿ.ಕೆ. ವಕೀಲರಿಂದ**

5. ಸಾಕ್ಷಿಗೆ ನಿಡಿ-1 ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಅದರಲ್ಲಿ ಸ.ನಂ.39 ರಲ್ಲಿ 28 ಎಕರೆ 34 ಗುಂಟೆ ಇದೆ ಎಂದರೆ ಸರಿ. ಸದರಿ ಆಸ್ತಿಯ ಬಗ್ಗೆ ವಾರಸುದಾರರು ಎಂದು 14 ಎಕರೆ 17 ಗುಂಟೆ ಬಾಪುಗೌಡನ ಹೆಸರಿನಲ್ಲಿ ಹಾಗೂ 14 ಎಕರೆ 17 ಗುಂಟೆ ಗುರುಲಿಂಗಪ್ಪನ ಹೆಸರಿನಲ್ಲಿ ಆಯಿತು ಎಂದರೆ ಸರಿ. ನಿಡಿ-3 ಪಹಣಿಯಲ್ಲಿ ಗೊಲ್ಲಾಳಪ್ಪನ ಹೆಸರಿನಲ್ಲಿ 7 ಎಕರೆ 13 ಗುಂಟೆ ಹಾಗೂ ರುದ್ರಗೌಡನ ಹೆಸರಿನಲ್ಲಿ 7 ಎಕರೆ 8 ಗುಂಟೆ ಮುಟೇಷನ್ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನಿಡಿ-4 ಪಹಣಿಯನ್ನು ತೋರಿಸಲಾಗಿ ಅದರಲ್ಲಿ ಬಾಪುಗೌಡನ ಹೆಸರು ರೌಂಡ್ ಹಾಕಿ ನಿಮ್ಮ ಹೆಸರು ಹಾಕಿದ್ದಾರೆ ಯಾವ ಆಧಾರದ ಮೇಲೆ ಮಾಡಿದ್ದಾರೆ ಎಂದರೆ 11 ಎಕರೆ 8 ಗುಂಟೆ ನನ್ನ ಹೆಸರಿನಲ್ಲಿ ಆಗಿರುತ್ತದೆ. 3 ಎಕರೆ 9 ಗುಂಟೆ ನನ್ನ ತಂದೆಯ ಹೆಸರಿನಲ್ಲಿ ಆಗಿರುತ್ತದೆ. ನಿಡಿ-4ರಲ್ಲಿ 11 ಎಕರೆ 8 ಗುಂಟೆಗೆ ಮಾಡಿರುತ್ತಾರೆ ಅದಕ್ಕೆ ಯಾವುದೇ ತಲಾಟಿರವರ ಸಹಿ ಇಲ್ಲ ಎಂದರೆ ಸುಳ್ಳು. ಸಾಕ್ಷಿಗೆ ನಿಡಿ-4 ಪಹಣಿಯನ್ನು ತೋರಿಸಲಾಗಿ ಅದರಲ್ಲಿ ಸಹಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ-4ರಲ್ಲಿ 14 ಎಕರೆ 17 ಗುಂಟೆ ಜಮೀನಿಗೆ ಬಾಪುಗೌಡರವರ ಹೆಸರು ತಿದ್ದಿದ್ದಾರೆ ಎಂದರೆ ಸುಳ್ಳು ಎಂದು ಉತ್ತರಿಸುತ್ತಾರೆ. ಈ ಪಹಣಿಗಳ ಬಗ್ಗೆ ಎಂದಾದರೂ ತಹಸೀಲನಲ್ಲಿ ವಿಚಾರಣೆ ಮಾಡಿದ್ದೀರಾ ಎಂದರೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಒಂದು ವೇಳೆ ಮಕ್ಕಳ ಹೆಸರಿನಲ್ಲಿ ಇರುವ ಆಸ್ತಿ ಇದ್ದರೆ under the guardianship ಎಂದು ತಾನೇ ಮಾರಬಹುದಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಪಹಣಿ ಪ್ರಕಾರ ನಾನು ನೋಡಿ ರಿಜಿಸ್ಟರ್ ಮಾಡಿಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಕೇವಲ ಪಹಣಿಯಾದ ಕೂಡಲೇ ಮಾಲೀಕರಾಗುತ್ತಾರೆ ಎಂದು ಎಲ್ಲಿಯಾದರೂ ನೋಡಿದ್ದೀರಾ ಎಂದರೆ ಪಹಣಿ ಮತ್ತು ಮುಟೇಷನ್ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಪಹಣಿ ಗೊಲ್ಲಾಳಪ್ಪರವರ ಹೆಸರಿನಲ್ಲಿ ಆಗಿದೆ ಎಂದು ಪಹಣಿ ಹಾಕಿಲ್ಲ ಎಂದರೆ ಹಾಕಿದೆ ಎಂದು ಉತ್ತರಿಸುತ್ತಾರೆ.

6. ಬಾಪುಗೌಡನ ಹೆಸರಿನಲ್ಲಿ ಸ.ನಂ.39/2 ರಲ್ಲಿ 14 ಎಕರೆ 17 ಗುಂಟೆ ಜಮೀನು ಎಂದರೆ 14 ಎಕರೆ 17 ಗುಂಟೆ ಎಂದು ಉತ್ತರಿಸುತ್ತಾರೆ. ನಿಡಿ-3 ರಲ್ಲಿ ಸಾಗುವಳಿ ಕಾಲಂನಲ್ಲಿ ಬಾಪುಗೌಡನ ಹೆಸರನ್ನು ಕಾಟ್ ಹಾಕಿ ಗೊಲ್ಲಾಳಪ್ಪ ರುದ್ರಗೌಡರವರ ಹೆಸರು ಹಾಕಿದ್ದಾರೆ ಎಂದರೆ ಕಾಟ್ ಹೊಡೆದಿದ್ದು ಇದೆ ಎಂದು ಉತ್ತರಿಸುತ್ತಾರೆ.

7. ಬಾಪುಗೌಡನಿಗೆ ಒಟ್ಟು 4 ಜನ ಮಕ್ಕಳು ಈಗಿದ್ದವರು 3 ಜನ ಮಕ್ಕಳು ಎಂದರೆ ಸರಿ. ಸಾಕ್ಷಿಗೆ ನಿಡಿ- 3 ಪಹಣಿಯನ್ನು ತೋರಿಸಲಾಗಿ ಗೊಲ್ಲಾಳಪ್ಪನ ಹೆಸರು ರೌಂಡ್ ಹಾಕಿ ಸಿದ್ದಪ್ಪಗೌಡ ಬಾಪುಗೌಡ ಎಂದು ಬರೆದಿದ್ದಾರೆ ಎಂದರೆ ಬಾಪುಗೌಡ ಗೊಲ್ಲಾಳಪ್ಪಗೌಡ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ದಾಖಲೆಯ ಪ್ರಕಾರ 7 ಎಕರೆ ಗೊಲ್ಲಾಳಪ್ಪನ ಹೆಸರಿನಲ್ಲಿ ಇರುವುದು ಸಿದ್ದಣ್ಣಗೌಡನ ಹೆಸರಿನಲ್ಲಿ ಆಗಿದೆ ಎಂದರೆ ಪಹಣಿಯಲ್ಲಿ ಬರೆದಿದೆ ಎಂದು ಉತ್ತರಿಸುತ್ತಾರೆ. ಇವರ ಹೆಸರು ಇದ್ದ ಮೇಲೆ ಇವರ ಹೆಸರನ್ನು ಕಾಟ್ ಹಾಕಿ ತಲಾಟಿರವರಿಗೆ ತಮ್ಮ ಮನಸ್ಸಿಗೆ ಬಂದ ಹಾಗೆ ಮಾಡುವ ಅಧಿಕಾರ ಇಲ್ಲ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಬಾಪುಗೌಡನ ಹೆಸರಿನಲ್ಲಿರುವ ಇನ್ನೊಂದು ಪಹಣಿ ಸೃಷ್ಠಿ ಮಾಡಿ ನಿಮ್ಮ ಹೆಸರಿಗೆ ಖೊಟ್ಟಿಯಾಗಿ ರಿಜಿಸ್ಟರ್ ಮಾಡಿಕೊಂಡಿದ್ದೀರಿ ಎಂದರೆ ಸುಳ್ಳು ಎಂದು ಉತ್ತರಿಸುತ್ತಾರೆ. ಬಾಪುಗೌಡ ಮಾಲೀಕರೂ ಅಲ್ಲ ಕಬ್ಜೆದಾರರೂ ಅಲ್ಲ ಮತ್ತು ಅವರು ನಿಮಗೆ ಜಮೀನು ಮಾರಾಟ ಮಾಡಿಲ್ಲ ಎಂದರೆ ಅವರೆ ಬಂದು ರಜಿಸ್ಟರ್ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

8. ಬಾಪುಗೌಡನ ಹೆಸರಿನಲ್ಲಿ ನೀವು ಹೇಳುವ ಪ್ರಕಾರ 14 ಎಕರೆ 17 ಗುಂಟೆ ಜಮೀನು 2 ಹಿಸ್ಸಾ ಯಾವ ಕಾರಣಕ್ಕೆ ಆಯಿತು ಎಂದರೆ ಗುರುಲಿಂಗಪ್ಪ ಗೌಡ ಮತ್ತು ಬಾಪುಗೌಡರವರ ಇಬ್ಬರ ಹೆಸರಿನಲ್ಲಿ ಡಿವೈಡ್ ಆಗಿದೆ ಎಂದು ಉತ್ತರಿಸುತ್ತಾರೆ. ಬಾಪುಗೌಡನ ಹೆಸರಿಗೆ ಪಾಲುಗಾರಿಕೆಯಲ್ಲಿ ಬಂದಾಗ ಸ.ನಂ.39/2 ಇತ್ತು ಎಂದರೆ ಸರಿ.

ಸ.ನಂ.39/2ಅ ಎಂದು ರಿಜಿಸ್ಟರ್ ಮಾಡಿಕೊಂಡಿದ್ದೀರಿ ಎಂದರೆ ಸರಿ. ಸ.ನಂ.39/2ಅ ಯಾವಾಗ ಆಯಿತು ನೀವೇನಾದರೂ ಸರ್ವೆ ಮಾಡಿಸಿದ್ದೀರಾ ಎಂದರೆ ಸರ್ವೆ ಮಾಡಿಸಿದ್ದಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ಸರ್ವೆ ಮಾಡಿಸಿರುವ ಬಗ್ಗೆ ರಿಪೋರ್ಟ್ ಹಾಕಿದ್ದೀರಾ ಎಂದರೆ ಹಾಕಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ-4 ಪಹಣಿಯನ್ನು ತೋರಿಸಲಾಗಿ ಮುಟೇಷನ್ ಜಾಗದಲ್ಲಿ ಮುಟೇಷನ್ ನಂಬರ್ ತಿದ್ದಿದ್ದಾರೆ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಮುಟೇಷನ್ ಮಾಡಿದ್ದಾರೆ ಅವರ ಮಕ್ಕಳ ಸಮ್ಮತಿ ಏನಾದರೂ ಪಡೆದುಕೊಂಡಿದ್ದೀರಾ ಎಂದರೆ ಪಡೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಬಾಪುಗೌಡ ಅಪ್ರಾಪ್ತ ಮಕ್ಕಳ ಏಳಿಗೆಗಾಗಿ ಮಾರಾಟ ಮಾಡಿಕೊಟ್ಟಿದ್ದೇನೆ ಎಂದು ನಿಡಿ-6 ನಲ್ಲಿ ಬರೆದಿಲ್ಲ ಎಂದರೆ ಏನು ಬರೆದಿದ್ದಾರೆ ಎಂದು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಇಲ್ಲಿತನಕ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಬಾಪುಗೌಡರವರು ಓರಲ್ಲಾಗಿ ನಿಮಗೆ ಹೇಳಿದ್ದಾರೆ ಎಂದು ಹೇಳುತ್ತಿದ್ದೀರಿ ಅದನ್ನು ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆದಿದ್ದೀರಾ ಎಂದರೆ ಬರೆದು ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಪ್ರತಿವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿ ಎಲ್ಲಿಯೂ ಸಹ ಬರೆದಿಲ್ಲ ಎಂದರೆ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ Legal Necessity of purpose ಬರೆದಿಲ್ಲ ಎಂದರೆ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಪ್ರತಿಫಲ ಹಣವನ್ನು ಮಕ್ಕಳ ಹೆಸರಿನಲ್ಲಿ ಡಿಪಾಸಿಟ್ ಇಟ್ಟಿರುವುದನ್ನು ಅದರ ಬಗ್ಗೆ ತಂದು ಹಾಕಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಬಾಪುಗೌಡನಿಗೆ Legal Necessity ಇಲ್ಲದಿದ್ದರೂ ಸಹ ಬಾಪುಗೌಡರವರ ಜಾಗದಲ್ಲಿ ಬೇರೆಯವರಿಗೆ ನಿಲ್ಲಿಸಿ ಕಾಗದ ಮಾಡಿಕೊಂಡಿದ್ದೀರಿ ಎಂದರೆ ಸುಳ್ಳು ಎಂದು ಉತ್ತರಿಸುತ್ತಾರೆ.

9. ನೀವು ಈ ದಾವೆಯಲ್ಲಿ ಸೇಲ್ ಡೀಡ್ ನಕಲು ಪ್ರತಿ ಮಾತ್ರ ಹಾಕಿರುತ್ತೀರಿ ಎಂದರೆ ಹೌದು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಸೇಲ್ ಡೀಡ್ ತೋರಿಸಲಾಗಿ ಅದರಲ್ಲಿ Sd/-

ಬಾಪುಗೌಡ ಎಂದು ಮಾತ್ರ ಬರೆದಿದ್ದಾರೆ ಎಂದರೆ ಸರಿ. ಬಾಪುಗೌಡನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇರುವಂತಹ ಅವರ ಸಹಿ ಇರುವಂತಹ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಒಂದು ವೇಳೆ ಬಾಪುಗೌಡ ಮಾರಾಟ ಮಾಡಿದ್ದೇ ಇದ್ದರೆ ಅವರ ಅಣ್ಣನ ಸಹಿ ಪಡೆಯಲು ತೊಂದರೆ ಇತ್ತಾ ಎಂದರೆ ತೆಗೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಬಾಪುಗೌಡ ಮಾರಾಟ ಮಾಡಲು ಬಂದಂತಹ ವ್ಯಕ್ತಿ ಇವನೇ ಎಂದು ಗುರುತಿಸಿದ ವ್ಯಕ್ತಿ ಯಾರೂ ಇಲ್ಲ ಎಂದರೆ ಇದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಅವರೇ ಕರೆದುಕೊಂಡು ಬಂದಂತಹ 6 ಜನ ಇದ್ದಾರೆ ಎಂದು ಉತ್ತರಿಸುತ್ತಾರೆ. ಯಾವ ಸಾಕ್ಷಿದಾರರು ಸಹ ಗುರುತಿಸಿದ ಸಹಿ ಇಲ್ಲ ಕೇವಲ ಸಾಕ್ಷಿದಾರರು ಎಂದು ಇದೆ ಎಂದರೆ ಸಹಿ ಇದರಲ್ಲಿ ಇಲ್ಲ ಎಂದು ಉತ್ತರಿಸುತ್ತಾರೆ. ಒಮ್ಮೆ ಮೈನರ್ ಮಕ್ಕಳ ಹೆಸರಿಗೆ ದಾಖಲೆ ಆದ ಮೇಲೆ ಆ ಮುಟೇಷನನ್ನು ಬಾಪುಗೌಡ ಚಾಲೆಂಜ್ ಮಾಡಿಲ್ಲ ಎಂದರೆ ಗೊತ್ತಿಲ್ಲ. ನೀವು ಇದರ ಬಗ್ಗೆ ಯಾವುದೇ ವಿಚಾರಣೆ ಮಾಡಿಲ್ಲ ಮತ್ತು ನೋಡಿಲ್ಲ ಎಂದರೆ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಬಾಪುಗೌಡ ಮಾಡಲು ಯಾವುದೇ ಮಾಲೀಕತ್ವದ ಹಕ್ಕು ಇರಲಿಲ್ಲ ಮತ್ತು ಮೈನರ್ ಮಕ್ಕಳ ಕಬ್ಜಾ ಕಾಲಂ ನಲ್ಲಿ ತೋರಿಸಿಲ್ಲ ಎಂದರೆ ಸುಳ್ಳು. ನೀವು ಹಾಕಿದ ದಾಖಲೆಯ ಪ್ರಕಾರ ಮೈನರ್ ಗಾರ್ಡಿಯನ್ ಹೆಸರಿನಲ್ಲಿ ಇರುವ ಕಬ್ಜೆಯನ್ನು ಯಾರು ತೆಗೆದುಕೊಂಡಿಲ್ಲ ಎಂದರೆ ಗೊತ್ತಿಲ್ಲ. ಬಾಪುಗೌಡನಿಗೆ ಯಾವುದೇ ಲೌಕಿಕ ವ್ಯವಹಾರ ಇರಲಿಲ್ಲ ದ್ದರಿಂದ ಬಾಪುಗೌಡನ ಹೆಂಡತಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸುಳ್ಳು ಎಂದು ಉತ್ತರಿಸಿ ಬಾಪುಗೌಡ ಊರಿನ ಗಣ್ಯ ವ್ಯಕ್ತಿ ಆಗಿದ್ದರು ಆದ್ದರಿಂದ ಅವರೇ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಪೋಲೀಸ್ ಗೌಡಿಕೆ ಇತ್ತಾ ಎಂದರೆ ಇತ್ತು ಎಂದು ಉತ್ತರಿಸುತ್ತಾರೆ. ಬಾಪುಗೌಡ ಗಣ್ಯ ವ್ಯಕ್ತಿ ಇದ್ದಿಲ್ಲ ಯಾವುದೇ ಸಮಾರಂಭಕ್ಕೆ ಹೋಗುತ್ತಿರಲಿಲ್ಲ ಆತನ ಹೆಂಡತಿಯೇ ಎಲ್ಲಾ ವ್ಯವಹಾರ ನೋಡಿಕೊಂಡು ಹೋಗುತ್ತಿದ್ದಳು ಎಂದರೆ ಸುಳ್ಳು.

10. ಬ್ಯಾಂಕಿನವರು ಯಾವುದೇ ವಿಚಾರ ಮಾಡದೇ ಖೊಟ್ಟಿ ಸೇಲ್ ಡೀಡ್ ಮೇಲೆ ಲೋನ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ-10 ತೋರಿಸಲಾಗಿ ಅದರಲ್ಲಿ ಸ.ನಂ.39/1ಅ, 39/ಅ1, 39/2ಬಿ ಎಂದು ಬರೆದು ಅಧಿಸೂಚನೆಯಲ್ಲಿ ತೋರಿಸಿದ ಕ್ಷೇತ್ರ 7 ಎಕರೆ ಎಂದು ಬರೆದಿದೆ ಎಂದರೆ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-10ರಲ್ಲಿ ತೋರಿಸಿದಂತಹ ಹೆಸರು ಅದೇ ರೀತಿ ಉಳಿದಿದೆ ಯಾರ ಹೆಸರಿಗೂ ಹಣವನ್ನು ವಿತರಣೆ ಮಾಡಿಲ್ಲ ಎಂದರೆ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಮಾಡಿಕೊಂಡಂತಹ ಖೊಟ್ಟಿ ಕಾಗದದ ಮೇಲೆ ಮಾಲೀಕ ಅಧಿಕಾರ ಸಿದ್ಧವಾಗುವುದಿಲ್ಲ ಎಂದರೆ ಅಧಿಕಾರ ಇದೆ ಎಂದು ಉತ್ತರಿಸುತ್ತಾರೆ. ಬಾಪುಗೌಡರವರು ಸಿದ್ದಣ್ಣಗೌಡನ ಮನೆಯಲ್ಲೇ ಇರುತ್ತಿದ್ದರು ಎಂದರೆ ಯಾರ ಮನೆಯಲ್ಲಿ ಇರುತ್ತಿದ್ದರು ಗೊತ್ತಿಲ್ಲ ಆದರೆ ಸುಂಬಡದಲ್ಲಿ ಇರುತ್ತಿದ್ದರು ಎಂದು ಉತ್ತರಿಸುತ್ತಾರೆ. ಬಾಪುಗೌಡರವರಿಗೆ ಲಕ್ವ ಹೊಡೆದಿತ್ತು ಎಂದರೆ ಗೊತ್ತಿಲ್ಲ. ಅವರು ಹೊರಗೆ ಬಂದು ಮಾರಾಟ ಮಾಡುವ ಯೋಗ್ಯತೆ ಇರಲಿಲ್ಲ ಬಂದು ಮಾರಾಟ ಮಾಡಿಲ್ಲ ಎಂದರೆ ಸುಳ್ಳು. ಖೊಟ್ಟಿ ಕಾಗದಪತ್ರವನ್ನು ಸಲ್ಲಿಸಿ ಹಾಗೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ